ನಿಂತಿರುತ್ತಾರೆಂಬುದನ್ನು ಮೊದಲೇ ಕರೆಕ್ಟಾಗಿ ಊಹಿಸುತ್ತಿದ್ದ ಚಾಣಾಕ್ಷಿಗಳು ಗಲ್ಲಿಗಲ್ಲಿಗಳಲ್ಲಿ ತೂರಿ ನಮ್ಮನ್ನು ಯಾಮಾರಿಸುತ್ತಿದ್ದರು. ಒಂದೆರೆಡು ಬಾರಿ ನಾವೂ ಸೋತಂತೆ ಮಾಡಿ ಕೊನೆಗೆ ಒಂದೊಂದು ವಾರ ಒಂದೊಂದು ಕಡೆ ಬಲೆ ಹರಡಿ ತಪಾಸಣೆಗೆ ಶುರುಹಚ್ಚಿಕೊಂಡೆವು.

ಚಾಣಕ್ಯನಂತಹ ಸುರಪಾನಿಗರು ಅಲ್ಲಿಗೂ ಬಿಡುತ್ತಿರಲಿಲ್ಲ. ಶನಿವಾರ ಬಂದರೆ ಸಾಕು, ಜಂಕ್ಷನುಗಳಲ್ಲಿ ನಿಂತ ನಮ್ಮ ಬಳಿಗೆ ಮೆಲ್ಲನೆ ಬಂದು 'ಏನ್ಸಾರ್ ಸಮಾಚಾರ, ಇವತ್ತು ಡ್ರಿಂಕ್ ಅಂಡ್ ಡ್ರೈವು ಅದೂ ಇದೂ ಅಂತ ಏನಾರಾ ಕಾರ್ಯಕ್ರಮ ಇಟ್ಕಂಡಿದೀರಾ...' ಅಂತ ತಿಳಿದುಕೊಳ್ಳಲೆತ್ನಿಸುತ್ತಿದ್ದರು. 'ಆ ವಿವರಗಳು ತಮಗ್ಯಾಕೆ ಸ್ವಾಮೀ? ಯಾವ ದಾರಿ ಹಿಡಿದು ಸೇಫಾಗಿ ಮನೆ ಸೇರ್ಕಬೋದು ಅಂತ ಪ್ಲಾನು ಮಾಡಿಕೊಳ್ಳುವುದಕ್ಕಾ?...' ಅಂತ ಪ್ರತಿಯಾಗಿ ನಾವು ಕೆಣಕುತ್ತಿದ್ದಂತೆ 'ಹ್ಹೆ... ಹ್ಹೆ... ಏನ್ಸಾರ್, ಏನೋ ಕ್ಯೂರಾಸಿಟೀಗೆ ಕೇಳುದ್ರೆ ನಮ್ ಬುಡುಕ್ಕೇ ಬತ್ತೀರಲ್ಲಾ?...' ಅಂತ ಪ್ಯಾಲಿ ನಗೆ ಬೀರಿ ನುಸುಳಿಕೊಳ್ಳುತ್ತಿದ್ದರು.

ಸರ್ಕಲುಗಳಲ್ಲಿ ನಾವು ನಡೆಸುವ ತಪಾಸಣೆಯು ಕೆಲವೊಮ್ಮೆ ಕಾಡುಗಳ್ಳ ವೀರಪ್ಪನ್‌ನ ಕೂಂಬಿಂಗು ಕಾರ್ಯಾಚರಣೆಯನ್ನೇ ನೆನಪಿಸುವಂತಿರುತ್ತಿತ್ತು. ಆ ಸೆಣಸಾಟ ತಿಣುಕಾಟ ಗೋಳಾಟಗಳೆಲ್ಲ ಸೇರಿ ಇಡೀ ಸರ್ಕಲು ಯುದ್ಧಭೂಮಿಯಂತೆ ಗೋಚರಿಸುತ್ತಿತ್ತು. ಇಡೀ ಕುಡುಕ ಸಮುದಾಯವನ್ನೇ ಎದುರು ಹಾಕಿಕೊಂಡು ನಾವು ಸಾರಿದ ಸಮರವಿದೆಯಲ್ಲಾ? ಅದೇನು ಸಾಧಾರಣ ಸಂಗತಿಯಾಗಿರಲಿಲ್ಲ. ಬಾಹುಬಲಿ ಸಿನಿಮಾದಲ್ಲಿ ತೋರುವ ಮಹಾಯುದ್ಧಕ್ಕಿಂತ ಯಾವುದರಲ್ಲೂ ಕಡಿಮೆಯಿರಲಿಲ್ಲ!

ಬಿಡಿ, ಸುರಪಾನಿಗರ ಸಾಹಸಗಳ ಬಗ್ಗೆ ಹೇಳುತ್ತಿದ್ದೆನಲ್ಲ? ಕೆಲವರು ಮೈ ತುಂಬಾ ಸೆಂಟು ಸುರಿದುಕೊಂಡು ಬರುತ್ತಿದ್ದರು. ಹತ್ತಿರ ಬರುತ್ತಿದ್ದಂತೆ ಘಮ್... ಅನ್ನುವ ಪರಿಮಳ ಮೂಗಿಗಡರುತ್ತಿತ್ತು. ಯಾವುದೋ ಸಮಾರಂಭಕ್ಕೆ ಹೊರಟವರಿರಬಹುದು ಅಂದುಕೊಳ್ಳುತ್ತಿದ್ದೆವು. ಸಮಾರಂಭಕ್ಕೆ ಹೊರಟವರಲ್ಲ, ಇವರು ಸಮಾರಾಧನೆ ಮುಗಿಸಿ ಹೊಂಟವರು ಎಂಬುದು ಕ್ರಮೇಣ ತಿಳಿಯಿತು. ತಾವು ಸುರುವಿಕೊಂಡಿರುವುದು ಗೊತ್ತಾಗದಿರಲೆಂದು ಈ ವಿಶೇಷ ತಯಾರಿಯೊಡನೆ ಬರುತ್ತಾರೆನ್ನುವುದರ ಜೊತೆಗೆ ಮಿಂಟ ಮತ್ತು ಸುಂಟಿಗಳಂತ ಪೆಪ್ಪರುಮೆಂಟುಗಳನ್ನು ಜಗಿಯುವವರದೂ ಇವೇ ತಂತ್ರಗಳೆಂದು ಗೊತ್ತಾಗಿ ಅಂಥವರನ್ನು ಗುಬುರು ಹಾಕಿ ಹಿಡಿಯತೊಡಗಿದೆವು.

ಕೆಲವು ಬೀರಬಲ್ಲನನ್ನೂ ಮೀರಿಸುವ 'ಮದ್ಯ'ವರ್ತಿಗಳಿದ್ದರು. ಅವರನ್ನು ಬಲೆಗೆ ಸಿಕ್ಕಿಸುವುದು ಸಾಧ್ಯವಿರಲಿಲ್ಲ. ನಶೆಯಲ್ಲಿದ್ದರೂ ಅವರ ಕಣ್ಣುಗಳು ತೀಕ್ಷ್ಣವಾಗಿರುತ್ತಿದ್ದವು. ದ್ರವರಾಜ ಹೊಟ್ಟೆಯಲ್ಲಿದ್ದರೂ ಅವರಿಂದ ಯಾವ ಆಟವನ್ನು ಆಡಿಸುತ್ತಿರಲಿಲ್ಲ. ನಮ್ಮನ್ನು ದೂರದಿಂದಲೇ ಗುರುತಿಸುತ್ತಿದ್ದ ಅವರು ತಮ್ಮ ಬೈಕನ್ನು ಅಲ್ಲೇ ಪಕ್ಕಕ್ಕೆ ತರುಬಿ ಪೆಟ್ಟಿಗೆ ಅಂಗಡಿ ಬಳಿಯೋ, ತಳ್ಳುಗಾಡಿಯವರೊಂದಿಗೋ ಚೌಕಾಸಿ ಮಾಡುವವರಂತೆ ನಟಿಸುತ್ತಾ ನಿಲ್ಲುತ್ತಿದ್ದರು. ಉಳಿದವರು ಗಾಡಿಯನ್ನು ತಮ್ಮ ಮನೆಯಲ್ಲಿ ಸೇಫಾಗಿ ನಿಲ್ಲಿಸಿ ಬಂದು ವಾಹನ ತಪಾಸಣೆ ಮಾಡುತ್ತಿದ್ದ ನಮ್ಮನ್ನು ದಿಟ್ಟಿಸುತ್ತ ನಿಲ್ಲುತ್ತಿದ್ದರು. ನಾವು ಸವಾರರನ್ನು ಅಡ್ಡಗಟ್ಟಲು ಅನುಸರಿಸುವ ಮೆಥೆಡುಗಳೇನು, ಲಾಟಿ ಪ್ರಯೋಗವೇನಾದರೂ ನಡೆಯುತ್ತದಾ? ಅಥವಾ ಬರಿಕೈಯಲ್ಲೇ ನಿಲ್ಲಿಸುತ್ತಾರಾ? ನಿಲ್ಲಿಸದೇ ಪರಾರಿಯಾದರೆ ಏನು ಮಾಡುತ್ತಾರೆ, ಮುಂದೆ ನಿಂತವರಿಗೆ ಮೆಸೇಜು ಕೊಡುತ್ತಾರಾ? ನಿಲ್ಲಿಸಿ ಏನೇನು ಪ್ರಶ್ನೆಗಳನ್ನು ಕೇಳುತ್ತಾರೆ? ಅನ್ನುವುದರಿಂದ ಹಿಡಿದು ಸೀಜು ಮಾಡಿದ ಬೈಕುಗಳನ್ನು ಎಲ್ಲಿಗೆ ಕೊಂಡೊಯ್ಯುತ್ತಾರೆ ಎಷ್ಟೆಷ್ಟು ದಂಡ ಹಾಕುತ್ತಾರೆ? ಅನ್ನುವ ತನಕವೂ ಮಾಹಿತಿ ಕಲೆ ಹಾಕಿ ತಮ್ಮ ಸುರಪಾನಿ ಸಮುದಾಯದವರಿಗೆ ಅಪ್‌ಡೇಟು ಮಾಡುವುದು ಇವರ ಕೆಲಸವಾಗಿರುತ್ತಿತ್ತು.